ದಿ:15.12.2023 OS.No.313/2021 PW-1

ದಿ:15.12.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ.ಕೆ.ಟಿ.ಟಿ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ದಿ:06.07.2009 ರ ಕ್ರಯದ ಕರಾರು ಪತ್ರದ ಮೂಲ ಪ್ರತಿಯನ್ನು ನಿಪಿ.1 ಎಂದು, ಸದರಿ ದಾಖಲೆಗೆ ಭಾನು ಪ್ರಸಾದ್ ಮತ್ತು ವೆಂಕಟೇಶ್ ಮತ್ತು ಯೋಗೀಶ್ ರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು ಸದರಿ ದಾಖಲೆಯನ್ನು ಸುರೇಶ್ ತಯಾರು ಮಾಡಿರುತ್ತಾರೆ. ರುಣಬಾರ ರಾಹಿತ್ಯ ಪ್ರಮಾಣ ಪತ್ರವನ್ನು ನಿಪಿ.2 ಎಂದು, ಒಪ್ಪಿಗೆ ಪತ್ರವನ್ನು ನಿಪಿ.3 ಎಂದು, ದಿ:30.10.2021 ರ ತಿಳುವಳಿಕೆ ನೋಟೀಸನ್ನು ನಿಪಿ.4 ಎಂದು, ಎರಡು ಅಂಚೆ ರಶೀದಿಗಳನ್ನು ನಿಪಿ.5 ಮತ್ತು 6 ಎಂದು, ಅಂಚೆ ಇಲಾಖೆಯವರು ನೀಡಿದ ಹಿಂಬರಹವನ್ನು ನಿಪಿ.7 ಎಂದು, ಜಾರಿಯಾಗದೆ ವಾಪಸ್ಸಾದ ಅಂಚೆ ಲಖೋಟೆಯನ್ನು ನಿಪಿ.8 ಎಂದು, ಸದರಿ ಅಂಚೆ ಲಖೋಟೇಯನ್ನು ತೆರೆದು ನೋಡಲಾಗಿ ಅದರ ಒಳಗಡೆ ಇರುವ ನೋಟೀಸಿನ ಪ್ರತಿಯನ್ನು ನಿ,ಪಿ. 8ಎ ಎಂದು, ಒಂದು ಗಣಕೀಕೃತ ಪಹಣಿಯನ್ನು ನಿಪಿ.9 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ವಕೀಲರಿಂದ

|ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ